ಅ) ಭಾರತದ ಸರ್ಕಾರದ ಜುಲೈ 1994ರ ಹೊಸ ಆರ್ಥಿಕ ನೀತಿಯ ಘೋಷಣೆಯ ನಂತರ 28 ಯೋಜನೆಗಳಿಗೆ ವಿದೇಶಿ ಸಹಯೋಗದೊಂದಿಗೆಬಹುರಾಷ್ಟ್ರೀಯ ಕಂಪನಿಗಳು ಕರ್ನಾಟಕದಲ್ಲಿ ಘಟಕಗಳನ್ನು ಸ್ಥಾಪಿಸಲು ಏಕಗವಾಕ್ಷಿ ಸಭೆ ಹಾಗೂ ಉನ್ನತ ಮಟ್ಟದ ಸಮಿತಿಯ ಅನುಮೋದನೆಯನ್ನು ನೀಡಲಾಗಿದೆ. ಈ ಕಂಪನಿಗಳು ಮಾಡುತ್ತಿರುವ ಅಂದಾಜು ಬಂಡವಾಳ ಒಟ್ಟು ರೂ. 672.73 ಕೋಟಿ ರೂಪಾಯಿಗಳು.

ರಾಜ್ಯದಲ್ಲಿ ಟಾಟಾ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಸ್ಥಾಪನೆ

274 - ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಟಾಟಾ ಕಬ್ಬಿಣ ಮತ್ತು ಉಕ್ಕು ಸಂಸ್ಥೆಯವರು ಹೊಸದಾಗಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಲು ಮುಂದೆ ಬಂದಿರುವರೇ?

ಆ) ಹಾಗಿದ್ದಲ್ಲಿ, ಈ ಉದ್ದೇಶಿತ ಕಾರ್ಖಾನೆ ಸ್ಥಾಪಿಸಲಾಗುವುದೇ?

ಇ) ಇದಕ್ಕೆ ಹೂಡತಕ್ಕ ಬಂಡವಾಳವೆಷ್ಟು?

ಈ) ರಾಜ್ಯ ಸರ್ಕಾರವು ಜಮೀನನ್ನು ನೀಡಲು ಒಪ್ಪಿಗೆ ನೀಡಿದೆಯೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) ಟಾಟಾ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯು ಪಶ್ಚಿಮ ತೀರದಲ್ಲಿ ಒಂದು ದೊಡ್ಡ ಸಮಗ್ರ ಉಕ್ಕಿನ ಘಟಕವನ್ನು ಸ್ಥಾಪಿಸುವ ಇಂಗಿತವನ್ನು ವ್ಯಕ್ತಪಡಿಸಿದೆ. ಟಾಟಾರವರು ಪರಿಗಣಿಸಿರುವ ಸ್ಥಳಗಳಲ್ಲಿ ಕರ್ನಾಟಕವೂ ಒಂದಾಗಿದೆ.

ಆ) ಈ ಬಗ್ಗೆ ಒಂದು ಅಂತಿಮ ತೀರ್ಮಾನವನ್ನು ಇನ್ನೂ ತೆಗೆದುಕೊಳ್ಳಬೇಕಾಗಿದೆ.

ಇ) ಈ ಯೋಜನೆ ರಾಜ್ಯಕ್ಕೆ ಬಂದಲ್ಲಿ ಯೋಜನಾ ವಿವರಗಳನ್ನು ಅಂತಿಮಗೊಳಿಸಿದ ನಂತರ ನಮಗೆ ತಿಳಿದುಬರುವುದು.

ಈ) ಟಾಟಾರವರು ಕರಾವಳಿ ಪ್ರದೇಶದಲ್ಲಿ ಪರ್ಯಾಯ ನಿವೇಶನಗಳನ್ನು ನೋಡಿರುತ್ತಾರೆ. ಈ ವಿಷಯದಲ್ಲಿ ಒಂದು ಅಂತಿಮ ತೀರ್ಮಾನವನ್ನು ಇನ್ನೂ ತೆಗೆದುಕೊಳ್ಳಬೇಕಾಗಿದೆ.

ಜನತಾ ನಿವೇಶನಗಳಿಗಾಗಿ ಬಂದ ಅರ್ಜಿಗಳು

147 - ಶ್ರೀ ಯು.ಬಿ. ಬಣಕರ್ (ಹಿರೇಕೆರೂರ್) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿವೇಶನ ರಹಿತರಿಂದ ಜಿಲ್ಲಾವಾರು 1991-92, 92-93, 93-94ರಲ್ಲಿ ನಿವೇಶನ ಕೇಳಿ ಬಂದ ಅರ್ಜಿಗಳೆಷ್ಟು?

ಆ) ಎಷ್ಟು ಜನರಿಗೆ ನಿವೇಶನ ಹಂಚಲಾಗಿದೆ.

ಇ) ನಿವೇಶನ ಸ್ವಾಧೀನ ಪಡಿಸಿಕೊಳ್ಳಲು ಖರ್ಚು ಮಾಡಿದ ಹಣ 1991-92, 92-93, 93-94ರಲ್ಲಿ ಎಷ್ಟು?

ಈ) ಅಧಿಕಾರಿಗಳೇ ನಿವೇಶನ ರಹಿತರ ಸಮೀಕ್ಷೆ ಮಾಡಿದ್ದಾರೆ. ಈ ಸಮೀಕ್ಷೆ ವರದಿ ಪ್ರಕಾರ ಜಿಲ್ಲಾವಾರು ಸಮೀಕ್ಷಾ ಸಂಖ್ಯೆ ಹಾಗು ನಿವೇಶನ ಕೊಟ್ಟ ಸಂಖ್ಯೆ 91-92, 92-93 ಹಾಗೂ 93-4 ರಲ್ಲಿ ಎಷ್ಟು.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) ಈ ಅವಧಿಯಲ್ಲಿ ಜನತಾ ಯೋಜನೆ ಮುಂದುವರಿಸಿಲ್ಲ. ಆಶ್ರಯ ಯೋಜನೆಯಡಿ ಈ ಅವಧಿಗಳಲ್ಲಿ ಕೆಳಕಂಡಂತೆ ಗುರಿಯನ್ನು ನಿಗಧಿ ಪಡಿಸಲಾಗಿದೆ.